ಆ ಬಂಡೆಗೆ ನಾನು ತಲೆ ಚಚ್ಚಿಕೊಳ್ಳುವುದಕ್ಕೆ ತಯಾರಿಲ್ಲ. ಇವರ ಜೊತೆ ಮಾತು ಬಂಡೆಗೆ ತಲೆ ಚಚ್ಚಿ ಕೊಂಡ ಹಾಗೆ ಆಗುತ್ತದೆ. ಆದ್ದರಿಂದ, ನಾನು ಇವರ ಮಾತು ಕೇಳುವ ಬದಲು ಹೋಗಿ ರೈತರ ಜಾಥಾ ಸೇರಿಕೊಳ್ಳುತ್ತೇನೆ.

೪–೦೦ ಪಿ.ಎಂ.

ಶ್ರೀ ಎಂ. ವಿ. ರಾಜಶೇಖರನ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಯವರು ಮಾತನಾಡುತ್ತಾ ಇದಕ್ಕೆ ರಾಜಕೀಯ ಬಣ್ಣವನ್ನು ಕೊಡುವುದು ಸರಿಯಲ್ಲವೆಂದು ಹೇಳಿದರು. ಅವರ ಮಾತನ್ನು ನಾನು ಒಪ್ಪುತ್ತೇನೆ. ಇವತ್ತಿನ ರೈತರ ಸಮಸ್ಯೆ ಏನಿದೆ ಅದು ಎಲ್ಲ ಪಕ್ಷಗಳವರಿಗೂ ಸಂಬಂಧಿಸಿದ ಸಮಸ್ಯೆ. ರೈತರು ತಮ್ಮ ಸಮಸ್ಯೆಗಳ ಬಗ್ಗೆ ಮಾತ್ರ ಕೇಳುತ್ತಿದ್ದಾರೆಯೇ ಹೊರತು ಬೇರೆ ಏನನ್ನೂ ಕೇಳುತ್ತಿಲ್ಲ. ಇವತ್ತು ಯಾವ ಸರ್ಕಾರವೇ ಇದ್ದರೂ ಅದನ್ನು ಕೇಳಲೇ ಬೇಕಾಗಿದೆ. ಈಗ ಗುಂಡೂರಾಯರ ಸರ್ಕಾರ ಇರುವುದರಿಂದ ಇದನ್ನು ರೈತರು ಕೇಳುತ್ತಿದ್ದಾರೆ. ಈ ವಿಚಾರವನ್ನು ನಾವು ಪಕ್ಷಾತೀತವಾಗಿ ನೋಡಿ ಚರ್ಚೆಮಾಡಲು ಸಿದ್ಧರಿದ್ದೇವೆಂದು ಮಾನ್ಯ ಮುಖಮಂತ್ರಿಯವರು ಆಶ್ವಾಸನೆಯನ್ನು ನೀಡಿ ಇದಕ್ಕಾಗಿ ೨ ದಿವಸಗಳನ್ನು ಮುಡಿಪಾಗಿ ತೆಗೆದಿಡುವುದು ಸರ್ವ ವಿಧದಿಂದಲೂ ಸೂಕ್ತ ಎಂದು ಹೇಳಬಯಸುತ್ತೇನೆ.

SRI R. GUNDU RAO.—I have no objection.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸಭಾ ನಾಯಕರು ಇದನ್ನು ಒಪ್ಪಿಕೊಂಡಿದ್ದಾರೆ. ಇದರ ಬಗ್ಗೆ ನಾನು ಒಂದು ಪತ್ರವನ್ನೂ ಕೂಡ ಮಾನ್ಯ ಮುಖ್ಯಮಂತ್ರಿಯವರಿಗೆ ಬರೆದಿದ್ದೇನೆ. ಇದು ಬಹಳ ಮಹತ್ವದ ಸಮಸ್ಯೆಯಾಗಿರುವುದರಿಂದ ಇದರ ಚರ್ಚೆಗಾಗಿ ಮಾನ್ಯ ಸದಸ್ಯರಾದ ರಾಜಶೇಖರನ್ ರವರು ಹೇಳಿದಂತೆ ೨ ದಿವಸಗಳನ್ನು ಗೊತ್ತು ಮಾಡಬೇಕು. ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಈ ವಿಚಾರಕ್ಕಾಗಿ ದಿನವನ್ನು ಗೊತ್ತುಮಾಡಿಲ್ಲವಾದ್ದರಿಂದ ತಾವು ಇದರ ಬಗ್ಗೆ ಗಮನಹರಿಸಿ ಸೂಕ್ತವಾದ ದಿನವನ್ನು ಗೊತ್ತುಮಾಡಬೇಕೆಂದು ಹೇಳಬಯಸುತ್ತೇನೆ.

ಶ್ರೀಮತಿ ಅನುಸೂಯ ಗಜಾನನ ಶರ್ಮ.—ಮಾನ್ಯ ಸಭಾಧ್ಯಕ್ಷರೆ, ಈಗ ಎದ್ದಿರುವ ರೈತರ ಸಮಸ್ಯೆ ಮಹತ್ತರವಾದುದು. ರೈತರು ಅವಿದ್ಯಾವಂತರು, ತಿಳುವಳಿಕೆ ಇಲ್ಲದ ಜನ, ಅಲ್ಲದೆ ಎಲ್ಲಕ್ಕಿಂತ ಮಿಗಿಲಾಗಿ ಬಡವರು. ಇದರಲ್ಲಿ ರಾಜಕಾರಣಿಗಳು ಸೇರಿಕೊಂಡು ಪ್ರಚೋದನೆಯನ್ನು ಮಾಡಿದ್ದರೂ, ಅದನ್ನು ಗಮನಕ್ಕೆ ತೆಗೆದುಕೊಳ್ಳದೆ ಈ ಬಡ ಹಾಗೂ ಮುಗ್ಧ ರೈತರಿಗೆ ಶಿಕ್ಷೆ ಮಾಡುವುದು ಬೇಡವೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

SRI B B. SAYANAK.—Mr. Speaker, whatever be the opinion of the Leader of the House Sri Gundu Rao, this is an agriculturists jatha and in support of them, we also stage a walk out.

(ಎಂ.ಇ.ಎಸ್. ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಹೆಚ್.ಡಿ. ದೇವೇಗೌಡ.—ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಯವರು ತಮ್ಮ ಭಾಷಣದಲ್ಲಿ ಈ ದೇಶದ ರೈತರ ಜ್ವಲಂತ ಸಮಸ್ಯೆ ಏನಿದೆ ಅದನ್ನು ಬಗೆಹರಿಸುವ ಬಗ್ಗೆ ಏನು ಹೇಳಿದ್ದಾರೆ, ಅದನ್ನು ನಾನು ಸ್ವಾಗತ ಮಾಡುತ್ತೇನೆ. ಕಳೆದ ಹತ್ತಾರು ವರ್ಷಗಳಿಂದಲೂ ಈ ವೇದಿಕೆಯ ಮೇಲೆ ಅಲ್ಲಹೆ ಗರಗಡೆಯಲ್ಲೂ ಸಮರ್ಥನೆ ಮಾಡಿದ್ದೇವೆ. ನಾವು ಈ ವೇದಿಕೆಯನ್ನು ರಾಜಕೀಯ ವೇದಿಕೆಯಾಗಿ ಬಳಸಬಾರದು. ಯಾವುದೋ ಒಂದು ರೈತರ ಸಮಸ್ಯೆಯನ್ನೇ ಮುಂದಿಟ್ಟುಕೊಂಡು ಈ ವೇದಿಕೆಯ ಪಾವಿತ್ರ್ಯತೆಯನ್ನು ಹಾಳು ಮಾಡುವುದು ಬೇಡ. ರೈತರ ಸಮಸ್ಯೆಗಳನ್ನು ಪರಿಹರಿಸಲು ಜನತಾ ಪಕ್ಷದವರು ಏನೇನು ಹೋರಾಟ ಮಾಡಿದ್ದಾರೆ ಎಂಬುದನ್ನು ನಾವು ಕೂಲಂಕುಷವಾಗಿ ಚರ್ಚೆ ಮಾಡಬೇಕು. ಕಾಂಗ್ರೆಸ್ (ಯು) ನವರು ಏನೇನು ಹೋರಾಟ ಮಾಡಿದ್ದಾರೆಂಬುದನ್ನೂ ಚರ್ಚೆ ಮಾಡಬೇಕು. ಇವತ್ತು ಈ ರೈತರ ಜಾಥಾ ವಿಚಾರದ ಬಗ್ಗೆ ಯಾರ್ಯಾರು ಏನೇನು ಮಾತನಾಡಿದ್ದಾರೆ ಎಂಬುದನ್ನು ಈ ಸಭೆಯ ಮುಂದಿಡಬೇಕು. ಇದನ್ನು ಚರ್ಚೆ ಮಾಡಲು ಎರಡೂವರೆ ಗಂಟೆಗಳ ಕಾಲವನ್ನು ನಿಗದಿ ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ರೈತರ ಸೋಗು ಹಾಕಿಕೊಂಡು ನಾವು ಬಂದಿದ್ದೇವೆಂದು ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದು ಸರಿಯಲ್ಲ. ನಾವು ಆ ರೀತಿ ಸೋಗು ಹಾಕಿಕೊಂಡು ಬರತಕ್ಕ ಜನರಲ್ಲ.